ಪರಿಕಲ್ಪನೆಯ ತುಣುಕೊಂದಕ್ಕೆ ಕನ್ನಡಿ ಹಿಡಿಯುವಂತಿದೆ.

ಕನ್ನಡದಲ್ಲೀಗ ಸಾಲು ಸಾಲು ಕಿರುಚಿತ್ರಗಳು ರೂಪುಗೊಳ್ಳುತ್ತಿವೆ. ಸಿನಿಮಾ ರೂಪಿಸುವ ಹಂಬಲದಲ್ಲಿ ಗಮನಾರ್ಹ ಸಂಖ್ಯೆಯ ತರುಣ ತರುಣಿಯರು ಕಿರುಚಿತ್ರಗಳ ತಾಲೀಮಿಗೆ ತಮ್ಮನ್ನೊಡ್ಡಿಕೊಂಡಿದ್ದಾರೆ. ಇವರ ನಡುವೆ ಕಿರುಚಿತ್ರ ಮಾಧ್ಯಮವನ್ನು ಗಂಭೀರವಾಗಿ ಪರಿಗಣಿಸಿರುವವರೂ ಇದ್ದಾರೆ. ಉದ್ದೇಶ ಯಾವುದಾದರೂ ಕಿರುಚಿತ್ರಗಳ ಫಸಲು ಕನ್ನಡದಲ್ಲೀಗ ಸಮೃದ್ಧವಾಗಿದೆ ಎನ್ನುವುದಂತೂ ಸತ್ಯ. ಕೆಲವು ಕಿರುಚಿತ್ರಗಳು ನೋಡುಗರ ಗಮನವನ್ನು ಸೆಳೆದಿರುವುದೂ ನಿಜ. 'ಚೌಕಾಬಾರ', 'ಪ್ರೆಸೆಂಟ್ ಸರ್', 'ಅನಲ'ದಂಥ ಕಿರುಚಿತ್ರಗಳು ಗಮನಾರ್ಹ ಸಂಖ್ಯೆಯ ಪ್ರೇಕ್ಷಕರನ್ನು ತಲುಪುವ ಜೊತೆಗೆ, ಗುಣಮಟ್ಟದ ಕಾರಣದಿಂದಲೂ ಮೆಚ್ಚುಗೆ ಗಳಿಸಿವೆ.

ರಾಘು ಶಿವಮೊಗ್ಗ ನಿರ್ದೇಶನದ 'ಚೌಕಾಬಾರ' 2015ರ ಸಾಲಿನಲ್ಲಿ ಅತ್ಯುತ್ತಮ ಕಿರುಚಿತ್ರ ರಾಜ್ಯಪ್ರಶಸ್ತಿ ಮನ್ನಣೆಗೆ ಪಾತ್ರವಾಗಿದೆ. ಅನಾಮಧೇಯ ದೂರವಾಣಿ ಕರೆಯೊಂದು ಮಧ್ಯಮವರ್ಗದ ಕುಟುಂಬವೊಂದರ ಮೇಲೆ ಉಂಟು ಮಾಡುವ ಪರಿಣಾಮಗಳ ಕಥೆ ಈ ಚಿತ್ರದ್ದು. ಕೆಲವು ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡಿದ್ದ ಇದು, ನಾಡಿನ ಹಲವು ಭಾಗಗಳಲ್ಲೂ ಸಹೃದಯರಿಗೆ ಮುಖಾಮುಖಿಯಾಗಿದೆ. 20 ನಿಮಿಷಗಳ ಅವಧಿಯ 'ಚೌಕಾಬಾರ' ಚಿತ್ರವನ್ನು ನೀನಾಸಂ ಸತೀಶ್‌ರಂಥ ಖ್ಯಾತ ಸಿನಿಮಾನಟ ನಿರ್ಮಿಸಿರುವುದು ಹಾಗೂ ಅಚ್ಯುತಕುಮಾರ್, ಶರತ್ ಲೋಹಿತಾಶ್ವ, ಅಶ್ವಿನಿಗೌಡರಂಥ ಜನಪ್ರಿಯ ಕಲಾವಿದರು ಪ್ರಮುಖ ಪಾತ್ರಗಳಲ್ಲಿ ನಟಿಸಿರುವುದು ವಿಶೇಷ. ಇದನ್ನು ಚಿತ್ರೀಕರಿಸಿರುವ ಅದ್ವೈತ ಗುರುಮೂರ್ತಿ ಕೂಡ ಚಿತ್ರರಂಗದಲ್ಲಿ ದುಡಿದ ಅನುಭವಿಯೇ. 'ಚೌಕಾಬಾರ'ದ ಯಶಸ್ಸು ರಾಘು ಶಿವಮೊಗ್ಗ ಅವರಿಗೆ ಚಿತ್ರರಂಗ ಪ್ರವೇಶಕ್ಕೆ ಚಿಮ್ಮುಹಲಗೆಯಾಗಿ ಪರಿಣಮಿಸಿದೆ. ಅವರೀಗ 'ಚೂರಿಕಟ್ಟೆ' ಎನ್ನುವ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ.

"ನಾನು ಕೋಟಿಗಟ್ಟಲೆ ಖರ್ಚು ಮಾಡಿ ನಿರ್ಮಿಸಿದ 'ರಾಕೆಟ್' ಸಿನಿಮಾದಿಂದ ಏನೂ ಬರಲಿಲ್ಲ. ಆದರೆ, ಹೆಚ್ಚಿನ ಪರಿಶ್ರಮವಿಲ್ಲದೆ ಮಾಡಿದ 'ಚೌಕಾಬಾರ'ಕ್ಕೆ ಎಲ್ಲವೂ ಬಂತು" ಎನ್ನುವ ನೀನಾಸಂ ಸತೀಶ್ ಅವರ ಮಾತು ಕನ್ನಡದಲ್ಲಿ ಕಿರುಚಿತ್ರಗಳ ಮಾಧ್ಯಮಕ್ಕೆ ಕಾಲ ಪಕ್ವವಾಗಿರುವುದನ್ನು ಸೂಚಿಸುವಂತಿದೆ.

ಚಿತ್ರೋತ್ಸವಗಳು ಕೂಡ ಕಿರುಚಿತ್ರಗಳ ಬೆಳವಣಿಗೆಗೆ ಸಹಾಯಕವಾಗಿವೆ. ಕಿರುಚಿತ್ರ ಪ್ರದರ್ಶನಕ್ಕೆ ಅವಕಾಶ ಹಾಗೂ ಅವುಗಳ ತಯಾರಿಕೆಯ ವಿವಿಧ ಆಯಾಮಗಳ ಬಗ್ಗೆ ಬೆಳಕು ಚೆಲ್ಲುವ ಉದ್ದೇಶದಿಂದ ಬೆಂಗಳೂರಿನ ಸುಚಿತ್ರಾ ಫಿಲ್ಮ್ ಅಕಾಡೆಮಿ ಇತ್ತೀಚಿನ ವರ್ಷಗಳಲ್ಲಿ 'ಅಂತರರಾಷ್ಟ್ರೀಯ ಕಿರುಚಿತ್ರಗಳ ಉತ್ಸವ' ನಡೆಸುತ್ತಿದೆ. ಕಳೆದ ಆಗಸ್ಟ್‌ನಲ್ಲಿ ನಡೆದ ಉತ್ಸವದಲ್ಲಿ, 42 ದೇಶಗಳ ಮುನ್ನೂರಕ್ಕೂ ಹೆಚ್ಚು ಕಿರುಚಿತ್ರಗಳು (ಕನ್ನಡ, ಭಾರತೀಯ, ಅಂತರರಾಷ್ಟ್ರೀಯ ಹಾಗೂ ಅನಿಮೇಷನ್ ಎನ್ನುವ ನಾಲ್ಕು ವಿಭಾಗಗಳಲ್ಲಿ) ಪ್ರದರ್ಶನ ಕಂಡಿದ್ದವು. ಪ್ರದರ್ಶನ ಕಂಡ 1ರಿಂದ 29 ನಿಮಿಷದ ಅವಧಿಯ ಕಿರುಚಿತ್ರಗಳಲ್ಲಿ ಪ್ರಯೋಗಶೀಲ ಪ್ರಯತ್ನಗಳೇ ಹೆಚ್ಚಾಗಿದ್ದವು. ವಿಶ್ವದ ವಿವಿಧ ಭಾಗಗಳ ಕಿರುಚಿತ್ರಗಳು ಹಾಗೂ ಅವುಗಳ ನಿರ್ಮಾತೃಗಳೊಂದಿಗೆ ಕನ್ನಡದ ಪ್ರತಿಭೆಗಳು ಸಂವಹನ ನಡೆಸಲಿಕ್ಕೆ ಅಪರೂಪದ ಅವಕಾಶವನ್ನು ಇಂಥ ಚಿತ್ರೋತ್ಸವಗಳು ಕಲ್ಪಿಸುತ್ತವೆ.

### ಕಿರುಚಿತ್ರದ ಆಳ- ಅಗಲ

ಕಿರುಚಿತ್ರ – ಹಾಗೆಂದರೇನು? ಏನಿದು ಕಿರುಚಿತ್ರ? ಈ ಪ್ರಶ್ನೆಗೆ ನಿರ್ದಿಷ್ಟ ಉತ್ತರ ಹೇಳುವುದು ಸುಲಭವಲ್ಲ. ಕವನಕ್ಕೆ ಪೂರಕವಾಗಿ ಹನಿಗವನ ಇದ್ದಂತೆ, ಕಾದಂಬರಿಯ ಬೊನ್ಸಾಯ್ ರೂಪದಲ್ಲಿ



ಆಕರ್ಷ ಕಮಲ



ಮದನ್‌ರಾಮ್ ವೆಂಕಟೇಶ್



ವಿ.ಕೆ.ಸಂಜ್ಯೋತಿ

